ಇಂದು ದಿಃ 09.09.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎಸ್ ಎನ್ ವಕೀಲರಿಂದಃ

ನಾನು 10ನೇ ತರಗತಿ ಓದಿದ್ದೇನೆ. ನನ್ನ ಗಂಡ ದಿ.23.03.2016ರಂದು ಮೃತರಾದರು. ನನ್ನ ಮಾವ 1968ರಿಂದಲೇ ಸೈಕಲ್ ಮತ್ತು ಅದರ ಬಿಡಿ ಭಾಗಗಳನ್ನು ಮಾರಾಟ ಮಾಡಿ ಸಂಸಾರ ನಡೆಸುತ್ತಿದ್ದರು ಎಂದರೆ ಸರಿಯಲ್ಲ, ಆ ರೀತಿ ನನ್ನ ಮಾವ ವ್ಯಾಪಾರ ಅಭಿವೃದ್ದಿ ಪಡಿಸಿಕೊಂಡು ಬಂದಿದ್ದರು ಎಂದರೆ ಗೊತ್ತಿಲ್ಲ. 2010 ರಲ್ಲಿ ನನ್ನ ಗಂಡ ಸೈಕಲ್ ಮತ್ತು ಬಿಡಿ ಭಾಗ ವ್ಯಾಪಾರ ಮಾಡುತ್ತಿದ್ದ ವಿಚಾರ ತಿಳಿಯಿತು. ನನ್ನ ಮದುವೆ ಪೂರ್ವದಿಂದಲೂ ಆ ರೀತಿ ಸೈಕಲ್ ಅಂಗಡಿ ಇತ್ತು. 1979ರಲ್ಲಿ ನನ್ನ ಗಂಡ ಜನಿಸಿದ್ದರು ಎಂದರೆ ಸರಿ. ನನ್ನ ಗಂಡ ನನ್ನ ಮಾವನಿಗೆ ಒಬ್ಬನೇ ಮಗ ಆದ ಕಾರಣ ಅವರನ್ನು ಸುಖವಾಗಿ ಬೆಳೆಸಿದ್ದರು ಎಂದರೆ ಸರಿ. ನನ್ನ ಮದುವೆಯಾದಾಗನಿಂದ ನನ್ನ ಮಾವ ಮತ್ತು ನಾವೆಲ್ಲರೂ ಜೊತೆಗೆ ಇದ್ದೆವು. ನನ್ನ ಗಂಡ ನನ್ನ ಮಾವನಿಗೆ ಒಬ್ಬನೇ ಮಗ ಆದ ಕಾರಣ ಅವರು ಸುಖವಾಗಿ ಬೆಳೆಸಿದ ಕಾರಣ ಸೈಕಲ್ ಅಂಗಡಿಯ ಅಗತ್ಯ ಇರಲಿಲ್ಲ ಎಂದರೆ ಸರಿಯಲ್ಲ. 1ನೇ ಅನುಕ್ರಮ ಆಸ್ತಿಯ ಪೂರ್ವ ಪಶ್ಚಿಮ 30 ಅಡಿ, ಉತ್ತರ ದಕ್ಷಿಣ 60 ಅಡಿ ಆಸ್ತಿಯನ್ನು ನನ್ನ ಗಂಡನ ಹೆಸರಿನಲ್ಲಿ 1 ನೇ ಪ್ರತಿವಾದಿ ಕ್ರಯ ಪತ್ರ ಮಾಡಿಸಿದ್ದರು ಎಂದರೆ ಸರಿ. ಆ ಖಾಲಿ ನಿವೇಶನದಲ್ಲಿ 1ನೇ ಪ್ರತಿವಾದಿ ಸಂಬಂಧಿಕರು ಮತ್ತು ಸ್ನೇಹಿತರಿಂದ ಒಂದು ಅಂಗಡಿ ಮತ್ತು ವಾಸದ ಮನೆ ಕಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ಗಂಡ ಸಂಪಾದನೆ ಮಾಡಿ ಕಟ್ಟಿದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಅಂಗಡಿ ಮಳಿಗೆಯನ್ನು ಬಾಡಿಗೆಗೆ ಕೊಟ್ಟು ಬಂದ ಹಣದಿಂದ ಸಾಲದ ಮೇಲಿನ ಬಡ್ಡಿಯನ್ನು 1ನೇ ಪ್ರತಿವಾದಿ ಕೊಡುತ್ತಿದ್ದರು ಎಂದರೆ ಸುಳ್ಳು. ಕಳೆದ 2 ವರ್ಷಗಳಿಂದ ಅಂಗಡಿ ಮಳಿಗೆ ಖಾಲಿ ಇದೆ ಎಂದರೆ ಸರಿಯಲ್ಲ.

ನನ್ನ ಗಂಡ ಮೃತರಾದ ನಂತರ ನಾನು 6 ವರ್ಷ 1ನೇ ಪ್ರತಿವಾದಿ ಜೊತೆ ಇದ್ದೆ. ನನ್ನನ್ನು ಎಲ್ಲೂ ಕಳುಹಿಸದೇ 1ನೇ ಪ್ರತಿವಾದಿ ನನ್ನ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. 2 ಮತ್ತು 3ನೇ ಪ್ರತಿವಾದಿಗಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಬೇಕು ಎಂದು ಸಿಟಿಜನ್ ಶಾಲೆ ನಂಜನಗೂಡಿಗೆ ಸೇರಿಸಿದ್ದರು ಎಂದರೆ ಸರಿ. ಈಗ್ಗೆ 3 ವರ್ಷಗಳ ಹಿಂದೆ ನಾನು ಪ್ರತಿವಾದಿಗಳಿಗೆ ಹೇಳದೆ ಕೇಳದೆ ನನ್ನ ಮಕ್ಕಳನ್ನು ಕರೆದುಕೊಂಡು ನನ್ನ ತವರು ಮನೆಗೆ ಹೋದೆ ಎಂದರೆ ನನ್ನ ಮಾವ ಬಲತ್ಕಾರ ಮಾಡಲು ಬಂದ ಕಾರಣ ನನ್ನ ಮಕ್ಕಳನ್ನು ಕರೆದುಕೊಂಡು ಹೋದೆ ಎನ್ನುತ್ತಾರೆ. ನನ್ನ ಮಾವ ಬಲತ್ಕಾರ ಮಾಡಲು ಬಂದರು ಎನ್ನುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ವಿರುದ್ದ ಕೌಲಂದೆ ಪೊಲೀಸ್ ಠಾಣೆಗೆ ದೂರು ನೀಡಿದ್ದೆ ಎಂದರೆ ಸರಿ. ಆದರೆ ಯಾವುದೇ ಕ್ರಿಮಿನಲ್ ಪ್ರಕರಣ ಅವರ ವಿರುದ್ದ ದಾಖಲಾಗಿಲ್ಲ ಎಂದರೆ ಸರಿ. ಆಗ ಪಂಚಾಯಿತುದಾರರು ಮತ್ತು ಪೊಲೀಸರು ನನಗೆ ಬುದ್ದಿ ಹೇಳಿ 1ನೇ ಪ್ರತಿವಾದಿಗೆ ವಯಸ್ಸಾಗಿದೆ ಸರಿಯಾಗಿ ನಡೆದುಕೊಳ್ಳಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮನೆಗೆ ಹೋದ ನಂತರ ನನ್ನ ಮಕ್ಕಳನ್ನು ನೋಡಲು ಪ್ರತಿವಾದಿಗಳಿಗೆ ಬಿಟ್ಟಿಲ್ಲ ಎಂದರೆ ಸರಿಯಲ್ಲ. ಶಾಲೆಗೆ ಮಕ್ಕಳನ್ನು ನೋಡಲು ಬಂದಾಗಲೂ ನಾನು ಬಿಟ್ಟಿಲ್ಲ ಎಂದರೆ ಸರಿಯಲ್ಲ. ನಂತರದ ದಿನಗಳಲ್ಲಿ ನಾನು ಮಕ್ಕಳನ್ನು ನೋಡಲು ಬಿಟ್ಟಿಲ್ಲ ಆ ಕಾರಣದಿಂದ ಪ್ರತಿವಾದಿಗಳು ಮಾನಸಿಕವಾಗಿ ನೊಂದಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಭಾವನೆ ಇದಿದ್ದದ್ದರೆ ನನ್ನ ಗಂಡ

ಸತ್ತ ನಂತರ 1ನೇ ಪ್ರತಿವಾದಿ ನನ್ನನ್ನು ನೋಡಿಕೊಳ್ಳುತ್ತಿರಲಿಲ್ಲ ಆ ಕಾರಣ ಅದು ಸುಳ್ಳು ಆಪಾದನೆ ಎಂದರೆ ಸರಿಯಲ್ಲ.

2ನೇ ಅನುಕ್ರಮ ಆಸ್ತಿಯನ್ನು ನನ್ನ ಮಾವ ಸ್ವಂತ ಸಂಪಾದನೆ ದಿ.01.09.1980ರಂದು ಕ್ರಯಕ್ಕೆ ಪಡೆದು ನಂತರ ಮನೆ ಕಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 4ನೇ ಅನುಕ್ರಮ ಆಸ್ತಿಯನ್ನು ದಿ.01.09.1984ರಂದು ಕ್ರಯ ಪತ್ರದ ಮೂಲಕ ಸ್ವಂತ ಸಂಪಾದನೆ ಮಾಡಿದ್ದಾರೆಎಂದರೆ ನನಗೆ ಗೊತ್ತಿಲ್ಲ. ಎರಡೂ ಸ್ವತ್ತಗಳೂ ಸಹ 1ನೇ ಪ್ರತಿವಾದಿಯ ಸ್ವಂತ ಸಂಪಾದನೆಯ ಸ್ವತ್ತುಗಳು ಎಂದರೆ ನನಗ ಗೊತ್ತಿಲ್ಲ. 2 ಆಸ್ತಿಗಳು ಸ್ವಂತ ಸಂಪಾದನೆಯಾದ ಕಾರಣ ದಿ.22.09.2022ರಂದು 1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ದಾನ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಕಾರಣ 2 ಮತ್ತು 4ನೇ ಐಟಂ ಆಸ್ತಿಗಳು 2ನೇ ಪ್ರತಿವಾದಿಗೆ ಸೇರಿದ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. 3ನೇ ಐಟಂ ಆಸ್ತಿ 1ನೇ ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯು 1ನೇ ಪ್ರತಿವಾದಿಯ ಪಿತ್ರಾರ್ಜಿತವಾಗಿದ್ದು 1ನೇ ಪ್ರತಿವಾದಿಗೆ ಕಾಳನಾಯಕ ಮತ್ತು ಬಸವನಾಯಕ ಎಂಬ ಸಹೋದರರು ಇದ್ದು ಅವರು 3 ಜನಕ್ಕೆ ಸೇರಿದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆಯನ್ನು ಪ್ರತಿವಾದಿ ಮತ್ತು ಅವರ ಇಬ್ಬರು ಸಹೊದರರು 1968ರ ಮೊದಲೇ ಮೂರು ಸಮ ಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕಾಳನಾಯಕರಿಗೆ ಪೂ-ಪ 12 ಅಡಿ , ದ-ಉ 5 ಅಡಿ ಮನೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಮನೆಯನ್ನು ದಿನಾಂಕ 27.04.1974 ರಂದು ನೊಂದಾವಣಿ ಪತ್ರದ ಮೂಲಕ ಕ್ರಯಕ್ಕೆ ಪಡೆದರು ಎಂದರೆ ನನಗೆ ಗೊತ್ತಿಲ್ಲ. 3ನೇ ಐಟಂ ನಲ್ಲಿ 1ನೇ ಪ್ರತಿವಾದಿಗೆ 5 x 12 ಮನೆ ಮಾತ್ರ ಪಿತ್ರಾರ್ಜಿತ, ಉಳಿಕೆ ಆಸ್ತಿಗಳು 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಆ ಕಾರಣ ನನಗಾಗಲೀ ಅಥವಾ ನನ್ನ ಮಕ್ಕಳಿಗೆ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳೂ 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದರೂ ನನ್ನ ಮಕ್ಕಳ ಮೇಲೆ ಕಾಳಜಿ ಹೊಂದಿ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ವಿರುದ್ದ ಅವರ ಆಗದವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದ ವಿವರಗಳು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮತ್ತು ಭಾಗ ನನಗೆ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.